ಹೋಯ್ತು.

ಹಾಗಾಗಿ ಇವತ್ತು ಏನಾದ್ರೂ ಆಗ್ಲಿ, ತಾನು ಗಟ್ಟಿ ಮನಸ್ಸು ಮಾಡಿ ತನ್ನೊಳಗಿನ ಭಾವಗಳನ್ನು ಸರ್ ಗೆ ಹೇಳಿಬಿಡ್ತೇನೆ, ಗುರುಗಳನ್ನು ಪ್ರೀತಿಸೋದು ತಪ್ಪೆಂದವರಾರು? ತನಗೆ ದಾರಿ ತೋರಿದ ಜೀವ, ತನ್ನ ಬದುಕನ್ನು ಬದಲು ಮಾಡಿದ ಆ ಗುರು ಎನ್ನುವ ಶಕ್ತಿ, ಜೀವನಪೂರ್ತಿ ನನ್ನ ಜೊತೆಗೆ ಇರಬೇಕು ಎಂದು ಬಯಸೋದು ಯಾವ ಸೀಮೆ ತಪ್ಪು, ಒಪ್ಪುತ್ತಾರೋ ಬಿಡುತ್ತಾರೋ, ಆದ್ರೆ ನನ್ನೊಳಗಿನ ಪ್ರೀತಿಯನ್ನ ನಾನು ಹೇಳದೇ ಸುಮ್ಮನುಳಿಯುವುದು ದೊಡ್ಡ ಅಪರಾಧ ಎಂದು ಮತ್ತೆ ಮತ್ತೆ ಅನ್ನಿಸಿತು ರಂಜಿನಿಗೆ.

ಶಿವಶಂಕರ್ ಸರ್ ಅಂದರೆ ಹಾಗೇ. ನೋಡಲು ಸುರಸುಂದರಾಂಗನಲ್ಲದಿದ್ದರೂ ಅವರು ಭರವಸೆಯಿಂದ ಮಾತಾಡಿದರೆ ನಿಜಕ್ಕೂ ಸುಂದರಾಂಗ ಎನ್ನಿಸಿಬಿಡುತ್ತಿದ್ದರು. ಅವರ ನಿಶ್ಚಲ ನಿಲುವು, ತಿಳಿನಗುವಿನ ದುಂಡು ಮುಖ, ಆಹಾ ಎನ್ನಿಸುವಂತಹ ಎತ್ತರ, ಒಮ್ಮೊಮ್ಮೆ ತೀರಾ ತಿಳಿ ಬಣ್ಣಗಳ ಕುರ್ತಾ ಧರಿಸಿ ಸಾಂಪ್ರದಾಯಿಕವಾಗಿ ಸೆಳೆಯುತ್ತಿದ್ದರೆ, ಮತ್ತೊಮ್ಮೆ ಹೊಸ ಕಾಲದ ಹುಡುಗನಂತೆ ಫಾರ್ಮಲ್ ಧರಿಸಿನಿಂದ ತುಂಬಿಕೊಂಡುಬಿಡುತ್ತಿದ್ದ ಅವರ ವ್ಯಕ್ತಿತ್ವಕ್ಕೆ ಬಹುತೇಕ ಹುಡುಗಿಯರೂ ಮಾರುಹೋಗಿದ್ದರಾದರೂ, ಅವರ ವ್ಯಕ್ತಿತ್ವಕ್ಕೆ ಅಂಟಿಕೊಂಡಿದ್ದ ಸರಳತೆ, ಹಳೆ ಕಾಲದವರಂತಿದ್ದ ಅವರ ಕೆಲವೊಂದು ಆದರ್ಶಗಳು, ಎಲ್ಲರ ಜೊತೆಗೆ ಮಾತನಾಡಿದರೂ ತೀರಾ ಹತ್ತಿರ ಬಿಟ್ಟುಕೊಳ್ಳದೇ ಅಂತರ ಕಾಯ್ದುಕೊಳ್ಳುವ ಅವರ ಜಾಣ್ಮೆ, ಅಂಟಿದರೂ ಅಂಟಿಕೊಂಡಿರದಂತಹ ಅವರ ವಿಲಕ್ಷಣ ಗುಣಗಳಿಂದ ಹುಡುಗಿಯರು ಜಾಸ್ತಿ ಇಷ್ಟಪಡಲು ಹೋಗುತ್ತಿರಲಿಲ್ಲ. ಆದರೆ, ಏನಾದರೂ ಒಂದು ನೆಪದಿಂದ ಮಾತಾಡುವುದು, ನಗುವುದು, ಸತಾಯಿಸುವುದೆಲ್ಲಾ ಮಾಡುತ್ತಿದ್ದರು. ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತ ವಿದ್ಯಾರ್ಥಿಗಳ ಮನಃಸ್ಥಿತಿ ಹೇಗೆಹೇಗೆಲ್ಲಾ ಕೆಲಸ ಮಾಡುತ್ತದೆ, ಅವರ ಮನೋಲೋಕ ಎಷ್ಟು ಕ್ರಿಯಾಶೀಲವಾಗಿರುತ್ತೆ ಎನ್ನುವುದೆಲ್ಲಾ ಶಿವಶಂಕರ್‌ಗೆ ಬಹುಬೇಗ ಅರ್ಥವಾಗುತ್ತಿತ್ತು. ಕಲಿಸುವುದು ರಾಜ್ಯಶಾಸ್ತ್ರ ವಿಷಯವಾದರೂ, ಲೌಕಿಕ ಜಗತ್ತಿನ ಕಷ್ಟ ನಷ್ಟಗಳು, ಬದುಕಿಗೆ ಬೇಕಾದ ಜೀವನಮೌಲ್ಯಗಳು, ತನ್ನ ಅನುಭವ, ವಿಚಾರ ಎಲ್ಲವನ್ನೂ ತರಗತಿಯಲ್ಲಿ ಹೇಳುತ್ತ ವಿದ್ಯಾರ್ಥಿಗಳಿಗೆ ಹೊಸ ಲೋಕವನ್ನೂ ನಾಲ್ಕು ಗೋಡೆ ಮಧ್ಯೆ ತೆರೆದಿಡುತ್ತಿದ್ದರು ಶಿವಶಂಕರ್. ಹಾಗಾಗಿ, ಇವರ ಕ್ಲಾಸು, ತುಂಬು ಯೌವ್ವನದ ವ್ಯಕ್ತಿತ್ವ ಹರೆಯದ ಹುಡುಗಿಯರ ಹೃದಯದೊಳಗೆ ಕಿಡಿಹೊತ್ತಿಸುತ್ತಿತ್ತು. ಇವೆಲ್ಲದರ ಬಗ್ಗೆ ಶಿವಶಂಕರ್ ಗೆ ಅರಿವಿತ್ತು. ಆದರೆ, ಉಪನ್ಯಾಸಕ ವೃತ್ತಿ ಅನ್ನುವುದು ಪವಿತ್ರ ವೃತ್ತಿ, ಈ ಕಾಲದ ಕಾಲೇಜುಗಳು ಹಾಳಾಗುತ್ತಿರುವುದೇ ಕೆಲವೊಂದು ಉಪನ್ಯಾಸಕರಿಂದ. ವಿದ್ಯಾರ್ಥಿನಿಯರ ಜೊತೆಗೆ ಸಂಬಂಧ ಬೆಳೆಸುವುದು, ಕಿರುಕುಳ ನೀಡುವುದು, ಅವರನ್ನು ಬೇರೆಯೇ ದೃಷ್ಟಿಯಿಂದ ನೋಡುವುದು, ಮೊದಲಾದ ಪ್ರಕರಣಗಳನ್ನು ಆಗಾಗ ನೋಡುತ್ತಲೇ ಇದ್ದವರು. ಹಾಗಾಗಿ ಉಪನ್ಯಾಸಕ ವೃತ್ತಿ ಜೀವನದಲ್ಲಿ ತಾನು ಯಾವ ಕಳಂಕಗಳನ್ನೂ ಅಂಟಿಸಿಕೊಳ್ಳಬಾರದು, ವಿದ್ಯಾರ್ಥಿನಿಯರ ವಿಷಯದಲ್ಲಂತೂ ಎಚ್ಚರಾಗಿರಬೇಕು ಅನ್ನಿಸುತ್ತಿತ್ತು.

ಆದರೆ, ವರುಷ 30 ಕಳೆದು ಮುವ್ವತ್ತೊಂದಕ್ಕೆ ಕಾಲಿಟ್ಟರೂ ಬ್ರಹ್ಮಚಾರಿಯೇ ಆಗಿ ಉಳಿದಿದ್ದ ಶಿವಶಂಕರ್ ಗೆ ಕೆಲವು ವಿದ್ಯಾರ್ಥಿನಿಯರನ್ನು ನೋಡಿದಾಗ ಮೈಮನಸ್ಸು ತುಂಬಿಬರುತ್ತಿತ್ತು. ತನ್ನ ಕನಸಿನ ಜೀವನಸಂಗಾತಿಯನ್ನು ಆ ವಿದ್ಯಾರ್ಥಿನಿಯರ ಕನಸುಗಂಗಳಲ್ಲಿ, ಕಿರುನಗೆಯಲ್ಲಿ ಕಂಡು ಸುಮ್ಮನಾಗುತ್ತಿದ್ದರು. ಅವರ ಬಗ್ಗೆ ಅತಿಯಾದ ಭಾವ ಉಕ್ಕಿ ಬಂದರೆ ತಾನೇನೋ ದೊಡ್ಡ ತಪ್ಪು ಮಾಡಿದೆ ಎನ್ನುವಂತೆ ತಮ್ಮ ಭಾವನೆಗಳನ್ನು ನಿಯಂತ್ರಿಸುತ್ತ, ಗಂಭೀರವಾಗಿರುತ್ತಿದ್ದರು. ತನ್ನ ಬದುಕಿಗೂ ಜೀವ ಕಾಯುವ ಹೆಣ್ಣು ಮನಸ್ಸು ಬೇಕು, ತನ್ನ ಕನಸು, ಆದರ್ಶ ಪೊರೆಯುವ ಜೀವ ಬೇಕು ಎಂದೂ ಅವರ ಒಳ ಮನಸ್ಸು ತುಯ್ಯುತ್ತಿತ್ತಾದರೂ, 'ಘಟಿಂಗ, ಉಪನ್ಯಾಸಕರಿಗೆ ವಿದ್ಯಾರ್ಥಿಗಳು ಪುಟ್ಟ ಪುಟ್ಟ ದೇವರಂತೆ, ಅವರಿಗೆ ಉಪನ್ಯಾಸಕರು ದೊಡ್ಡ ದೇವರಂತೆ. ಹಾಗಿರುವಾಗ ಅವರನ್ನು ಕೊನೆತನಕ ಗೌರವದಿಂದಲೇ ಕಂಡು ಸುಮ್ಮನಾಗಿಬಿಡು' ಎಂದು ಇನ್ನೊಂದು ಮನಸ್ಸು ಹೇಳಿದಂತಾಗಿ ಮೌನವಾಗುತ್ತಿದ್ದರು.

ಈ ಕಾಲದ ಸ್ಮಾರ್ಟ್ ಫೋನ್, ವಾಟ್ಸಾಪ್, ಫೇಸ್ಬುಕ್‌ನ ತೋಳಿನಲ್ಲಿ ಇದ್ದುಬಿಡುತ್ತ, ವಾಸ್ತವ ಮರೆಯುವ, ಸೂಕ್ಷ್ಮ ಸಂವೇದನೆಗಳನ್ನೇ